ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: [illegible] ದಿನಾಂಕ : DATE : 9/3/2012

ಸಿಡಿ ಕೇಸ್ ಫೈನಲ್

ದೂರು ಹಿಂಪಡೆಯಲು ಕಲ್ಲಹಳ್ಳಿ ನಿರ್ಧಾರ
ವಾಪಸ್ ಪಡೆದರೂ ಸದ್ಯಕ್ಕಿಲ್ಲ ಪ್ರಕರಣಕ್ಕೆ ತೆರೆ

ವಿಜಯವಾಣಿ ಸುದ್ದಿಜಾಲ ಬೆಂಗಳೂರು

ರಾಜ್ಯ ರಾಜಕಾರಣದಲ್ಲಿ ಸಂಚಲನ ಸೃಷ್ಟಿಸಿರುವ ಅಶ್ಲೀಲ ಸಿ.ಡಿ. ಪ್ರಕರಣ ಭಾನುವಾರ ಮತ್ತೊಂದು ಮಹತ್ವದ ತಿರುವು ಪಡೆದುಕೊಂಡಿದೆ. ದೂರುದಾರ ದಿನೇಶ್ ಕಲ್ಲಹಳ್ಳಿ ಯೂಟರ್ನ್ ಹೊಡೆದಿದ್ದು, ಮಾಜಿ ಸಚಿವರ ವಿರುದ್ಧ ನೀಡಿರುವ ದೂರು ಹಿಂಪಡೆಯುವ ನಿರ್ಧಾರಕ್ಕೆ ಬಂದಿದ್ದಾರೆ. ಆದರೆ ಕೇಸ್ ಈಗಾಗಲೇ ಹನಿಟ್ರ್ಯಾಪ್ ರೂಪ ಪಡೆದುಕೊಂಡಿರುವ ಕಾರಣ ಮಾಜಿ ಸಚಿವ, ಯುವತಿ, ದೂರುದಾರ ಹಾಗೂ ವಿಡಿಯೋ ಬಹಿರಂಗಪಡಿಸಿದವರ ವಿರುದ್ಧದ ಪೊಲೀಸರ ತನಿಖೆ ಮುಂದುವರಿಯಲಿದೆ. ಏತನ್ಮಧ್ಯೆ ತನಿಖೆಯನ್ನು ಸಿಬಿಐಗೆ ಒಪ್ಪಿಸಬೇಕೆಂದು ಕೆಎಂಎಫ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಸರ್ಕಾರವನ್ನು ಒತ್ತಾಯಿಸಿದ್ದಾರೆ. ದಿನೇಶ್ ಕಲ್ಲಹಳ್ಳಿ ಮಾ.2ರಂದು ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಗೆ ಮಾಜಿ ಸಚಿವರ ವಿರುದ್ಧ ದೂರು ಕೊಟ್ಟು ನಂತ್ರಸ್ತೆಗೆ ನ್ಯಾಯ ಕೊಡಿಸುವಂತೆ ಮನವಿ ಮಾಡಿದ್ದರು. ಅಶ್ಲೀಲ ಸಿಡಿ ಬಹಿರಂಗವಾಗುತ್ತಿದ್ದಂತೆಯೇ ಪ್ರಭಾವಿ ರಾಜಕಾರಣಿ ಸಚಿವ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರು. ಇತ್ತ ಹೆಚ್ಚಿನ ವಿಚಾರಣೆಗೆ ಹಾಜರಾಗುವಂತೆ ದೂರುದಾರನಿಗೆ ಪೊಲೀಸರು ನೋಟಿಸ್ ನೀಡಿದ್ದರು. ಮಾರನೇ ದಿನ ಪೊಲೀಸರೆದುರು ಹಾಜರಾಗಿದ್ದ ಕಲ್ಲಹಳ್ಳಿ, ನಂತ್ರಸ್ತೆಯ ಪರಿಚಯ ತನಗಿಲ್ಲ, ಸಂಪರ್ಕದಲ್ಲೂ ಇಲ್ಲ ಎಂದು ಹೇಳಿಕೆ ನೀಡಿ ವಾಪಸಾಗಿದ್ದರು. ಪುಟ 2



ಸಿಡಿ ಮೊದಲು



ತಾಂತ್ರಿಕ ದೋಷದ ಸಿಡಿ

17 ಸರ್ವರ್, ₹15 ಕೋಟಿ ಖರ್ಚು

ಇದು ನಕಲಿ ಸಿಡಿ ಎಂಬುದಕ್ಕೆ ದೂರು ಹಿಂಪಡೆದಿರುವುದೇ ಸಾಕ್ಷಿ ಎಂದು ಕೆಎಂಎಫ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಪ್ರತಿಕ್ರಿಯಿಸಿದ್ದಾರೆ. ಬೇರೆ ದೇಶಗಳಲ್ಲೂ ಈ ವಿಡಿಯೋ ಕೈಚಳಕ ನಡೆದಿದೆ. 15 ಕೋಟಿ ರೂ.ವೆಚ್ಚದಲ್ಲಿ 17 ಸರ್ವರ್ ಬುಕ್ ಮಾಡಿದ್ದಾರೆ. ಇದರ ಹಿಂದೆ ಒಂದು ತಂಡವೇ ಕೆಲಸ ಮಾಡಿದೆ ಎಂದು ಅವರು ಆರೋಪಿಸಿದ್ದಾರೆ.

ಬಟ್ಟೆಯ ಮೇಲೆ ಮುಳ್ಳು ಬಿದ್ದರೂ, ಮುಳ್ಳಿನ ಮೇಲೆ ಬಟ್ಟೆ ಬಿದ್ದರೂ ಹರಿಯುವುದು ಬಟ್ಟೆಯೇ. ಮಾಜಿ ಸಚಿವರ ಅಶ್ಲೀಲ ಸಿಡಿ ಪೊಲೀಸರಿಗೆ ಕೊಟ್ಟೆ. ಆದರೆ, ಈಗ ಮಹಿಳೆಯ ಚಾರಿತ್ರ್ಯಹರಣ ನಡೆಯುತ್ತಿದೆ.

ಸಾಮಾಜಿಕ ಕಾರ್ಯಕರ್ತೆ

15

ಮಾಜಿ ಸಚಿವರ ಸಿ.ಡಿ. ಕೇಸ್‌ಗೆ ಟ್ವಿಸ್ಟ್

ಮೊದಲನೇ ಪುಟದಿಂದ...

ಪೊಲೀಸರು ಸಂತ್ರಸ್ತೆ ಮತ್ತು ಆಕೆ ಕುಟುಂಬಸ್ಥರು ಹಾಗೂ ಸಿಡಿ ಹಿಂದಿರುವವರ ಮಾಹಿತಿ ಕಲೆ ಹಾಕುವ ಕೆಲಸ ಮುಂದುವರಿಸಿದ್ದಾರೆ.

ಕಲ್ಲಹಳ್ಳಿ, ಭಾನುವಾರ ತನ್ನ ವಕೀಲ ಕುಮಾರ್ ಮುಖಾಂತರ ದೂರು ವಾಪಸ್ ಪಡೆಯುವುದಾಗಿ ಪೊಲೀಸರಿಗೆ ಪತ್ರ ಕಳುಹಿಸಿದ್ದರು. ಆದರೆ, ದೂರು ದಾರರೇ ಠಾಣೆಗೆ ಖುದ್ದು ಬಂದು ಪತ್ರ ನೀಡಬೇಕೆಂದು ಇನ್‌ಸ್ಪೆಕ್ಟರ್ ಬಿ. ಮಾರುತಿ ಸೂಚಿಸಿದರು. ಹೀಗಾಗಿ ಸೋಮವಾರ ಕಲ್ಲಹಳ್ಳಿ ದೂರು ಹಿಂಪಡೆಯುವ ಸಾಧ್ಯತೆಗಳಿವೆ. ಕಲ್ಲಹಳ್ಳಿ ದೂರು ಪರಿಶೀಲನೆ ಹಂತದಲ್ಲಿಯೇ ಇದ್ದು, ಕೆಲವೊಂದು ತಾಂತ್ರಿಕ ಸಮಸ್ಯೆಗಳ ಕಾರಣಕ್ಕೆ ಎಫ್‌ಐಆರ್ ಆಗಿರಲಿಲ್ಲ. ಹೀಗಾಗಿ ಠಾಣೆ ಮಟ್ಟದಲ್ಲೇ ದೂರು ಹಿಂಪಡೆಯಲು ಅವಕಾಶವಿದೆ. ಒಂದು ವೇಳೆ ಎಫ್‌ಐಆರ್ ದಾಖಲಾಗಿದ್ದರೆ ಸಂಬಂಧಪಟ್ಟ ಕೋರ್ಟ್‌ಮುಂದೆಯೇ ಹಾಜರಾಗಿ ಮನವಿ ಮಾಡಿಕೊಳ್ಳಬೇಕಾಗಿತ್ತು. ಆಗ ದೂರು ರದ್ದುಗೊಳಿಸುವುದು

ದೂರು ವಾಪಸ್‌ಗೆ ಕಾರಣ?

- ಸಂತ್ರಸ್ತೆ ನೇರ ಸಂಪರ್ಕದಲ್ಲಿ ಇಲ್ಲದೇ ಇರುವುದು
- ಪೊಲೀಸರ ಮುಂದೆ ಸಂತ್ರಸ್ತೆ ಹೇಳಿಕೆ ಕೊಡಿಸುವಲ್ಲಿ ವಿಫಲ
- ಪ್ರತಿಪಕ್ಷದವರು ಒಂದಾಗಿ ಹನಿಟ್ರ್ಯಾಪ್ ದಂಧೆ ಆರೋಪ
- ಪ್ರತಿಪಕ್ಷ, ಇನ್ನಿತರ ಸಂಘ ಸಂಸ್ಥೆಯಿಂದ ಬೆಂಬಲ ಸಿಗದೆ ಇರುವುದು
- ವಿಡಿಯೋ ವೈರಲ್ ಆಗಿ ಮಹಿಳೆ ಗೌರವಕ್ಕೆ ಧಕ್ಕೆ ತಂದ ಆರೋಪ
- ಪೊಲೀಸ್ ತನಿಖೆ ತನ್ನ ವಿರುದ್ಧವೇ ತಿರುಗಿಬೀಳುವ ಭಯ
- ಮಾಜಿ ಸಿಎಂ ಹಾಗೂ ಇಬ್ಬರು ಶಾಸಕರ ಸಿಡಿ ಇರುವ ಹೇಳಿಕೆ ಹಾಗೂ ಬ್ಲ್ಯಾಕ್‌ಮೇಲ್ ಆರೋಪ

ನ್ಯಾಯಾಧೀಶರ ವಿವೇಚನೆ ಒಳಪಟ್ಟಿರುತ್ತಿತ್ತು. ಇಷ್ಟಕ್ಕೆ ಮುಗಿಯಲ್ಲ: ಆದರೆ, ಈ ವಿವಾದ ಅಂತಿಮ ಘಟ್ಟ ತಲುಪಿಲ್ಲ. ದಿನೇಶ್ ಕಲ್ಲಹಳ್ಳಿ ವಿರುದ್ಧ ಪುಟ್ಟೇಗೌಡ, ಪ್ರಶಾಂತ್ ಕುಮಾರ್ ಮತ್ತು ಕೆ.ಎಚ್. ಇಂದಿರಾ ಎಂಬುವರು ನೀಡಿರುವ ದೂರು ಪೊಲೀಸ್ ಠಾಣೆಯಲ್ಲಿ ಬಾಕಿ ಉಳಿದಿವೆ. ಈಗಾಗಲೇ ಹನಿಟ್ರ್ಯಾಪ್ ಬಲೆಯಲ್ಲಿ ಮಾಜಿ ಸಚಿವರನ್ನು ಸಿಲುಕಿಸಲಾಗಿದೆ ಎಂಬ ಆರೋಪಗಳು ಕೇಳಿ ಬರುತ್ತಿವೆ. ಅಶ್ಲೀಲ ವಿಡಿಯೋ ಸುದ್ದಿ ವಾಹಿನಿಗಳು ಮತ್ತು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆದ ಕಾರಣ ಸಂತ್ರಸ್ತೆ ಮತ್ತು ಮಾಜಿ ಸಚಿವರ ಗೌರವಕ್ಕೆ ಧಕ್ಕೆ ಉಂಟಾಗಿದೆ. ಸಮಾಜದ ಸ್ಥಾನಮಾನದ ಮೇಲೂ ಪರಿಣಾಮ ಬೀರಿದೆ. ಜಾಲತಾಣದಲ್ಲಿ ಅಶ್ಲೀಲ ವಿಡಿಯೋ ಅಪ್‌ಲೋಡ್ ಮಾಡಿರುವ ಸಂಬಂಧ ಪೊಲೀಸರು, ತನಿಖೆ ಮುಂದುವರೆಸುವ ಸಾಧ್ಯತೆಗಳಿವೆ. ಕೆಕ್ಸ್ ಸಿಡಿ ಮಾಡಿದವರು ಯಾರು? ಯಾವ ಉದ್ದೇಶಕ್ಕೆ ಮಾಡಲಾಗಿದೆ? ಇದಕ್ಕೂ ಮೊದಲು ಸಿಡಿ ಇಟ್ಟುಕೊಂಡು ಬ್ಲ್ಯಾಕ್‌ಮೇಲ್ ಮಾಡಲಾಗಿತ್ತೇ? ಆ ವಿಡಿಯೋ ಎಲ್ಲಿ ಎಡಿಟ್ ಆಗಿದೆ? ಇನ್ನೂ ಎಷ್ಟು ವಿಡಿಯೋ ಇವೆ? ಅಸಲಿ ವಿಡಿಯೋ ಎಲ್ಲಿದೆ ಎಂಬ ಪ್ರಶ್ನೆಗಳನ್ನು ಮುಂದಿಟ್ಟುಕೊಂಡು ತನಿಖೆ ನಡೆಸಲಿದ್ದಾರೆ.